ಈ ನಡುವೆ, ಪೊಲೀಸರು ಬೀಟಿನ ನೆಪದಲ್ಲಿ ನಡುರಾತ್ರಿಗೆ ನಮ್ಮನ್ನು ನಿರ್ದಯವಾಗಿ ಎಬ್ಬಿಸಿ ಟೀಮಾಡಿಸಿ ಕುಡಿಯತೊಡಗಿದರು. ಎಂದೊ ಬರಬಹುದಾದ ಕಳ್ಳರಿಗಿಂತ ನಿತ್ಯ ಆಗಮಿಸುವ ಆರಕ್ಷಕರ ಆತಿಥ್ಯ ಒಜ್ಜೆಯಾಯಿತು. ಅವರು ಸುಮ್ಮನೆ ಕುಡಿದು ಹೋಗುತ್ತಿರಲಿಲ್ಲ. ಜಗಲಿ ಮೇಲೆ ಕೂತು ಗಂಟೆಗಟ್ಟಲೆ ಡಿಪಾರ್ಟ್‌ಮೆಂಟಿನ ತರಲೆ ತಾಪತ್ರಯ ಚರ್ಚಿಸುತ್ತಿದ್ದರು. ಅಪರಾತ್ರಿಯ ನೀರವದಲ್ಲಿ ಅವರ ಗೊಣಗೊಣ ಕೂರಲಗಿನಂತೆ ಚುಚ್ಚಿ ಕಿರಿಕಿರಿ ಮಾಡುತ್ತಿತ್ತು. ಒಮ್ಮೆ ಅವರಲ್ಲಿ ಜಗಳವೂ ಆಯಿತು. ಅವರಲ್ಲೊಬ್ಬನಿಗೆ ಹೊಸದಾಗಿ ಲಗ್ನವಾಗಿದ್ದು ನೈಟ್‌ಡ್ಯೂಟಿಗೆ ಹಾಕಿದ್ದರು. ಅವನು ಕೆರಳಿ 'ಯಾವ ಮಿಂಡ್ರಿಮಗನಿಗೆ ಬೇಕಣ್ಣ ಈ ಕೆಲಸ? ನಾಳೆ ನಾಡಿದ್ದು ರಿಟೈರಾಗೊ ಸಬ್‌ಇನ್‌ಸ್ಪೆಕ್ಟರು ಹೆಂತಿ ಜತೀಗಿ ಬೆಚ್ಚಗ ಮಕ್ಕಂತಾನ. ನಾನಿಲ್ಲಿ ಪ್ರಾಯದ ಹುಡುಗ ಬೀದಿನಾಯಿ ತರ ತಿರಗಬೇಕು. ಈ ದರಿದ್ರ ಡೂಟೀನೇ ಬ್ಯಾಡ. ರಿಜೈನ್ ಮಾಡಿ ಹೋಗ್ತೀನಿ' ಎಂದು ಕುಣಿಯತೊಡಗಿದನು. ಆಗ ಅವನ ಸೀನಿಯರನು 'ಏ, ಹಂಗ್ ಮಾಡ್ಲಿಡಿಯೊ ಬುದ್ಧಿಗೇಡಿ. ನಿಮ್ಮಪ್ಪ ಹೊಲಮಾರಿ ಜಾಬ್ ಕೊಡಸ್ಯಾನ. ಹೆಣಮಕ್ಕಳ ಜತಿಗೆ ಮಕ್ಕಳಕ ಅವಸರ ಮಾಡಬ್ಯಾಡ. ಒಂದೆರಡು ವರ್ಷ ಕಷ್ಟಪಡು. (ಅವರ ಗಲಾಟೆ ಕೇಳಿ ಹೊರಬಂದ ನನ್ನತ್ತ ತಿರುಗಿ) ಇವನಿಗೆ ನೀವಾನ ಬುದ್ಧಿಹೇಳಿ ಸಾ. ಇನ್ನಾ ಪ್ರೊಬೆಶನರಿ ಮುಗದಿಲ್ಲ. ಕೆಲಸ ಬಿಟ್ಟು ಹೋಕ್ತೀನಿ ಅನಲಿಕ್ಕ ಹತ್ಯಾನ' ಎಂದನು. ಅಧ್ಯಾಪಕ ವೃತ್ತಿಗೆ ರಾಜೀನಾಮೆ ಒಗೆದು ಊರಲ್ಲಿರುವ ಐದೆಕೆರೆ ಹೊಲದಲ್ಲಿ ರೈತನಾಗಿ ಜೀವನ ಮಾಡಬಾರದೇಕೆ ಎಂದು ಆಲೋಚಿಸುತ್ತಿದ್ದ ನಾನು, ತನ್ನ ಪ್ರಿಯಪತ್ನಿಯ ಸಂಗಕ್ಕಾಗಿ ಕೆಲಸ ಬಿಡಬಲ್ಲೆ ಎನ್ನುವ ಆ ನವವಿವಾಹಿತ ಉರುಫ್ ಉತ್ಕಟ ಪ್ರೇಮಿಗೆ, ಯಾವ ಬಾಯಲ್ಲಿ ತಾನೇ ಸ್ವಾಂತನ ಹೇಳಲಿ?

ಒಂದೇ ತಿಂಗಳಲ್ಲಿ ಪೊಲೀಸರಿಗೆ ಟೀ ಸೋಸಿ ಬಾನು ರಸ್ತೆಬದಿ ಡಬ್ಬಕ್ಯಾಂಟಿನ್ ಇಡುವಷ್ಟು ಅನುಭವಸ್ಥಳಾದಳು. ಒಂದು ರಾತ್ರಿ ಪೊಲೀಸರು ಚಹದ ಋಣ ತೀರಿಸಲೆಂಬಂತೆ ತಮ್ಮದೊಂದು ಹಳೆಯ ವಿಶಲ್ ಕೊಟ್ಟು, 'ಇದನ್ನ ಇಟ್ಟುಗೋರಿ. ಕಳ್ಳರು ಬಂದ್ರೆ ಊದರಿ. ಈ ಏರಿಯಾದಲ್ಲಿ ಎಲ್ಲಿದ್ದರೂ ಬರ್ತೀವಿ' ಎಂದರು. ಊದು ಕವಾಯತು ಶುರುವಾಯಿತು. ಭಂಗಿ ಚಿಲುಮೆಯಂತಿದ್ದ ಕಿರುಗೊರಳಿನ ಆ ಸ್ಟೀಲಿನ ವಿಶಲ್, ಸಣ್ಣಪುಟ್ಟ ಉಸಿರಿಗೆ ಶಬ್ದ ಹೊರಡಿಸುತ್ತಿರಲಿಲ್ಲ. ಕೆನ್ನೆಯುಬ್ಬಿಸಿ ದಮ್ಮುಕಟ್ಟಿ ಊದಿದರೆ ಹಳೇಮನೆಯ ಕದ ತೆರೆಯುವಾಗ ಬರುವಂತಹ ಕೀಚಲು ರವವನ್ನು ಹೊರಡಿಸುತ್ತಿತ್ತು. ಕಳ್ಳರು ಮುಂದೆ ನಿಂತಾಗ ನಮ್ಮ ಶ್ವಾಸಕ್ಕೆ ಬೇಕಾದ ಗಾಳಿಯೇ ಒದಗುತ್ತೊ ಇಲ್ಲವೊ? ಇನ್ನು ಇದಕ್ಕೆಲ್ಲಿಂದ ತರುವುದು? ನನಗಿದು ಸರಿಯೆನಿಸಲಿಲ್ಲ. ಪೊಲೀಸರು ಶಾಸ್ತ್ರಕ್ಕೆಂಬಂತೆ ಬೀಟುಪುಸ್ತಕದಲ್ಲಿ ಸಹಿ ಹಾಕಿ, ಜಗುಲಿಕಟ್ಟೆಯನ್ನೊಮ್ಮೆ ಲಾಠಿಯಿಂದ ಕುಟ್ಟಿ, ಕೇಟಿ ಕುಡಿದು, ಮನೆಗಳ ಟೆರೇಸುಗಳ ಮೇಲೆ ಬೀಸುವ ತಂಗಾಳಿಯಲ್ಲಿ ಗಡದ್ದಾದ ನಿದ್ದೆ ತೆಗೆಯತೊಡಗಿದರು.

ನಾನು ಅಡಕತ್ತರಿಯಲ್ಲಿ ಸಿಕ್ಕಿದೆ. ಹಳ್ಳಕ್ಕೆ ಬಿದ್ದವನ ಮೇಲೆ ಕಲ್ಲು ಒಗೆಯುತ್ತ ಹೆಂಡತಿ ನುಡಿದಳು: 'ಗಿಳಿಗೆ ಹೇಳಿದಂತೆ ಹೇಳಿದೆ. ಶಿವಮೊಗ್ಗ ಒಳ್ಳೇ ಊರು. ಕಾಲೇಜು ಕೆಲಸ ಬಿಟ್ಟು ಕಾಣದ ದೇಶಕ್ಕೆ ಹೋಗದು ಬ್ಯಾಡಾ ಅಂತ. ನನ್ನ ಮಾತು ಎಲ್ಲಿ ಕೇಳ್ತೀ? ನನ್ನ ಮಾತಂದರೆ ಕಸಕ್ಕೆ ಸಮಾನ. ನೀನೇ ಇಲ್ಲಿನ ಸುಖ ಬಾಚಿಕೊಂಡು ಇರು. ಬೇರೆ ಕಡೆ ಮನೆ ಮಾಡುವ ತನಕ ನಾನು ತವರು ಮನೇಲಿ ಇರ್ತೀನಿ. ಕಳ್ಳರ ಕೈಲಿ ಮಕ್ಕಳ ಜೀವ ಹೋಗುವುದನ್ನು ನೋಡಲಾರೆ' ಎಂದು ಗಂಟುಮೂಟೆ ಕಟ್ಟಲಾರಂಭಿಸಿದಳು. ಕಳ್ಳರ ದೆಸೆಯಿಂದ ನನ್ನ ಸುಖಸಂಸಾರ